IJCRT.ORG ISSN : 2320-2882
INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಚಂದನವಾಹಿನಿಯಲ್ಲಿ ಮಹಿಳೆ

ಡಾ.ಪ್ರೇಮಪಲ್ಲವಿ ಸಿ.ಬಿ.,
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ.

ಕನ್ನಡ ಸಾಹಿತ್ಯವು ಹಲವು ಘಟ್ಟಗಳಲ್ಲಿ ಹಾಯ್ದು ಬರುವಾಗ ಭಿನ್ನ ರೀತಿಯ ಪ್ರಭಾವಗಳಿಗೆ ಒಳಗಾಗುತ್ತಾ ಅದರಿಂದ ಪುಷ್ಟಿಗೊಳುತ್ತಾ ಸಾಗಿದೆ. ಇಂಥ ಪ್ರಭಾವಗಳನ್ನು ಆಯಾ ಕಾಲದ ವಿದ್ವಾಂಸರು ದಾಖಲಿಸುತ್ತಾ ಬಂದಿದ್ದಾರೆ. ಸಾಹಿತ್ಯಕ್ಕೆ ಸಮಾಜ ಪ್ರತಿಸ್ಪಂಧಿಸಿದುದರ ಪರಿಣಾಮವಿದು. ಸಾಹಿತ್ಯ ಮತ್ತು ಸಮಾಜದ ನಡುವಣ ಸಂಬಂಧ ಸಂಕೀರ್ಣವಾದುದ್ದು. ಯಾವಾಗ ಉತ್ಪಾದನೆಯ ಸಂಬಂಧಗಳು ಬದಲಾಗುತ್ತವೆಯೋ ಆಗ ಸಾಮಾಜಿಕ ಸಂರಚನೆಯೂ ಬದಲಾಗುತ್ತದೆ. ಸಮಾಜವು ಬದಲಾದಾಗ ಸಾಮಾಜಿಕ ಮೌಲ್ಯಗಳು ಬದಲಾಗುವುದು ಮಾತ್ರವಲ್ಲ ; ಅದರ ಜೊತೆಗೆ ದ್ವಂದ್ವಾತ್ಮಕ ಸಂಬಂಧವುಳ್ಳ ಸಾಹಿತ್ಯದ ರೂಪಗಳು ಬದಲಾಗುತ್ತವೆ. ಈ ನಿಲುವು ಇಂದು ನಿನ್ನೆಯದಲ್ಲ. ಅನಾದಿಯಿಂದಲೂ ನಡೆದುಕೊಂಡು ಬಂದಿರುವಂತದ್ದು. ಈ ರೀತಿಯ ವಾದವನ್ನು ವಾಸ್ತವವಾಗಿ ಮಂಡಿಸಿದವರು ಮಾರ್ಕ್ಸವಾದಿಗಳು. ಈ ದೃಷ್ಟಿಯಿಂದ ಸಾಹಿತ್ಯ ಮತ್ತು ಸಮಾಜದ ನಡುವಣ ಸಂಬಂಧದ ಸಂಕೀರ್ಣತೆಯು ಕೆಲವು ಸಾಹಿತ್ಯಿಕ ರೂಪಗಳಲ್ಲಿ ನಿಚ್ಚಳವಾಗಿ ವ್ಯಕ್ತವಾದರೆ ಇನ್ನು ಕೆಲವು ರೂಪಗಳಲ್ಲಿ ಈ ಸಂಬಂಧವು ಸ್ಪಷ್ಟ ಸ್ಥಗಿತ ಮಾದರಿಯಲಿದೆ.

ಸಾಹಿತ್ಯ ಮತ್ತು ಸಮಾಜದ ನಡುವಣ ಸಂಬಂಧವು ಹೆಚ್ಚು ತೆರೆದುಕೊಳ್ಳುವುದು ಸಾಹಿತ್ಯಿಕ ರೂಪಗಳಲ್ಲಾದರೂ ಬೇರೊಂದು ರೀತಿಯಲ್ಲಿ ಅಥವಾ ಮಾದರಿಯಲ್ಲಿ ಕಲಾ ಪ್ರಕಾರಗಳ ಮುಖೇನ ಅಭಿವ್ಯಕ್ತಿಗೊಂಡಿರುವುದನ್ನು ಗಮನಿಸಬಹುದು. ಆಧುನಿಕ ಸಾಹಿತ್ಯ ಪ್ರಕಾರಗಳ ಇನ್ನೊಂದು ಮಜಲುಗಳು ಎಂಬಂತೆ ಇರುವ ಮಾಧ್ಯಮಗಳು ಕೂಡ ಸಮಾಜವನ್ನು ಇನ್ನಷ್ಟು ಅರ್ಥೈಸುತ್ತವೆ. ಜಗತ್ತನ್ನೆ ಹಳ್ಳಿಯಾಗಿಸುವಲ್ಲಿ ಮಾಧ್ಯಮಗಳ ಪಾತ್ರ ಹಿರಿದು. ಜನಪ್ರಿಯ ಸಮೂಹ ಮಾಧ್ಯಮಗಳು ಸಾಮಾನ್ಯ ಜನತೆಯ ಮೇಲೆ ಬೀರುವ ಪ್ರಭಾವ ಅಪಾರವಾದದ್ದು. ಏಕೆಂದರೆ ಜನ ಸಾಮಾನ್ಯರ ಆಲೋಚನೆಗಳ ದಿಕ್ಕು ದಾಟಿಗಳ ಮೇಲೆ; ಅವರ ಆಸಕ್ತಿಯನ್ನು, ಭಾವನೆಗಳನ್ನು ಕೆರಳಿಸುವಲ್ಲಿ, ಭಿನ್ನಾಭಿಪ್ರಾಯಗಳನ್ನು ರೂಪಿಸುವಲ್ಲಿ ಕೊನೆಗೆ ಅವರ ನಡವಳಿಕೆಯ ಮೇಲೂ ಸಹ ಪರೋಕ್ಷವಾಗಿ ಪ್ರಭಾವ ಬೀರುತ್ತವೆ. ಈ ಸಂದರ್ಭದಲ್ಲಿ ಜಗತ್ತಿನ ಸುಮಾರು ಎಲ್ಲಾ ಸಮಾಜಗಳಲ್ಲಿ ಆಗುತ್ತಿರುವ ಮುಖ್ಯ ಬದಲಾವಣೆಗಳಲ್ಲಿ ಕಡೆಗಣಿಸಲ್ಪಟ್ಟ ಮೂಲೆಗೊತ್ತಲ್ಪಟ್ಟಿರುವ ಹಲವಾರು ಸಮುದಾಯಗಳಲ್ಲಿ ಅತೀ ದೊಡ್ಡ ಸಮುದಾಯವೆಂದರೆ ಸ್ತ್ರೀ ಸಮುದಾಯ. ಈ ಸ್ತ್ರೀ ಸಮುದಾಯವನ್ನು ಸಮೂಹ ಮಾಧ್ಯಮಗಳು ಮುಖ್ಯವಾಗಿ ದೂರದರ್ಶನ ಚಂದನ ವಾಹಿನಿ ಬಳಸಿಕೊಂಡಿರುವ ರೀತಿಯನ್ನು ಕುರಿತು ವಿಶ್ಲೇಷಿಸುವುದೇ ನನ್ನ ಅಧ್ಯಯನದ ಉದ್ದೇಶ.

ಇಂದು ಸಮೂಹ ಮಾಧ್ಯಮಗಳ ಒಡೆತನ ಮತ್ತು ನಿರ್ವಾಹಣೆಗಳು ಜಾಗತೀಕರಣಗೊಂಡು ಬಹು ರಾಷ್ಟ್ರೀಯ ಕಂಪನಿಗಳ ಆರ್ಥಿಕ ಹಿತಸಕ್ತಿಗಳೇ ಅಲ್ಲಿ ಪ್ರಾಮುಖ್ಯ ಪಡೆದಿದ್ದು ಜನ ಸಾಮಾನ್ಯರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಒಳಿತಿಗಾಗಿ ಬಳಕೆಯಾಗುವ ಬದಲು ಲಾಭಗಳಿಕೆಗಾಗಿ ದುರ್ಬಳಕೆಯಾಗುತ್ತಿರುವುದು ದುರದೃಷ್ಟಕರ ಸಂಗತಿ. ಇಂತಹ ಈ ಹೊತ್ತಿನಲ್ಲಿ ಇವುಗಳು ಸಮಾಜದ ಮೇಲೆ ಬೀರುವ/ ಬೀರುತ್ತಿರುವ ಪ್ರಭಾವ ಎಂತದ್ದು? ಅದರಲ್ಲಿಯೂ ಸಮಾಜದ ಜನಸಂಖ್ಯೆಯ ಅರ್ಧದಷ್ಟಿರುವ ಸ್ತ್ರೀಯರ ಮತ್ತು ಅವರಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಮಾಧ್ಯಮಗಳು ಸ್ಪಂಧಿಸುತ್ತಿರುವ ಪರಿ ಎಂತದ್ದು? ಎಂಬುದನ್ನು ಅವಲೋಕಿಸಿದರೆ ನಿರಾಶೆಯಾಗದಿರದು.

ಸಮೂಹ ಮಾಧ್ಯಮಗಳಲ್ಲಿ ದೂರದರ್ಶನ ಅತ್ಯಂತ ಹೆಚ್ಚಿನ ಜನಪ್ರಿಯತೆಯ ವ್ಯಾಪ್ತಿಯನ್ನು ಹೊಂದಿದೆ. ಸರಳ, ವೇಗದ ಸಂವಹನ ಸಾಮರ್ಥ್ಯ, ದೃಶ್ಯ ಸಮಯೋಜನೆ, ಜನರಲ್ಲಿ ಜಾಗೃತಿ ಮೂಡಿಸುವ ಶಕ್ತಿ ಇರುವ ದೂರದರ್ಶನ ಈ ಮೊದಲು ಸೂಚಿಸಿದ ಧ್ಯೇಯಗಳು ಕರ್ತವ್ಯಗಳನ್ನು ಯಶಸ್ವಿಯಾಗಿ ಸಾಧಿಸುವಂತಹ ಶಕ್ತಿಶಾಲಿ ಮಾಧ್ಯ.ಮ. ಖಾಸಗಿ ವಾಹಿನಿಗಳ ಜೊತೆಗೆ ಪೈಪೋಟಿಗೆ ಇಳಿಯದೆ ತನ್ನತನ ಉಳಿಸಿಕೊಳ್ಳುವುದರ ಜೊತೆಗೆ ಸಕಾರಾತ್ಮಕ ಉತ್ತಮಿಕೆಯನ್ನೂ ಪ್ರತಿಬಿಂಬಿಸುತ್ತದೆ. ಆರಂಭವಾದಾಗಿನಿಂದ ಇಂದಿನವರೆಗೂ ಸರ್ಕಾರದ ಮಾರ್ಗಸೂಚಿಯನ್ವಯ ಮಾಹಿತಿಪೂರ್ಣ, ಸಾಂದರ್ಭಿಕ, ಪ್ರಗತಿಪರ ಚಿಂತನೆಗಳುಳ್ಳ ಅನೇಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಲೇ ಬಂದಿದೆ, ಈಗಲೂ ಮಾಡುತ್ತಿದೆ. ಹಾಗೇ ನೋಡಿದರೆ ಮನರಂಜನೆಗಿಂತ ಸಾಮಾಜಿಕ ಅಭಿವೃದ್ಧಿಯ ಪ್ರೇರಕಶಕ್ತಿಯಾಗಿ ಸೇವೆ ಸಲ್ಲಿಸುವ ಅವಕಾಶ ದೊರೆತದ್ದು ಈ ವಾಹಿನಿಗೆ. ಪ್ರಸ್ತುತ ಸುದ್ದಿ ವಿಶ್ಲೇಷಣೆಗಳು, ವಿಚಾರ, ಮನರಂಜನೆ, ಜಾಹಿರಾತುಗಳು ಇತ್ಯಾದಿಗಳಿಂದ ಜನ ಸಾಮಾನ್ಯರ ಮೇಲೆ ಅಪಾರ ಪ್ರಭಾವ ಬೀರುತ್ತಾ ವೇಗವಾಗಿ ಬೆಳೆಯುತ್ತಿರುವ ದೂರದರ್ಶನದ ಕಾರ್ಯಕ್ರಮಗಳು ಮಹಿಳೆಯರಿಗೆ ನೀಡಿರುವ ಸ್ಥಾನಮಾನಗಳ ಬಗ್ಗೆ ಆಳವಾದ ಒಳನೋಟ ಹರಿಸುವಂತಹ ಅಧ್ಯಯನಗಳ ಅಗತ್ಯವಿದೆ. "ದೂರದರ್ಶನ ಚಂದನ ವಾಹಿನಿಯಲ್ಲಿ ಮಹಿಳೆ " ಎಂಬ ಪ್ರಸ್ತುತ ಲೇಖನ ಈ ನಿಟ್ಟಿನ ಅಧ್ಯಯನದ ಒಂದು ಸಣ್ಣ ಪ್ರಯತ್ನ.

ಜಾಗತೀಕರಣಗೋತ್ತರದ ಈ ಸಮಯದಲ್ಲಿ ಈಗಾಗಲೇ ನಮ್ಮ ದೇಶದಲ್ಲಿ ಬಲವಾಗಿ ಬೇರೂರಿ ಹರಡಿಕೊಂಡಿರುವ ಆರ್ಥಿಕ, ಉದಾರೀಕರಣ, ಖಾಸಗೀಕರಣಗಳ ಹಿನ್ನಲೆಯಲ್ಲಿ ಹಾಗೂ ಖಾಸಗಿ ಹಿತಸಕ್ತಿಗಳು ಸಮೂಹ ಮಾಧ್ಯಮಗಳ ಮೇಲೆ ಆರ್ಥಿಕ ಹಿಡಿತವನ್ನು ಬಿಗಿಗೊಳಿಸುತ್ತಿರುವ ಈ ಸಂದರ್ಭದಲ್ಲಿ ಮಾಧ್ಯಮಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಕಾಳಜಿಯುಕ್ತ ವಿಚಾರಗಳ ಬಿತ್ತರಗೊಳುತ್ತವೆಯೇ ಎಂಬ ಅನುಮಾನ ಪ್ರಶ್ನೆಯ ರೂಪದಲ್ಲಿ ನನ್ನನ್ನು ಯಾವಾಗಲೂ ಕಾಡುತ್ತಿರುತ್ತದೆ. ಖಾಸಗಿ ಚಾನಲ್‌ಗಳೊಂದಿಗೆ ತಾಳೆ ಹಾಕಿದಾಗ ದೂರದರ್ಶನ ಚಂದನ ವಾಹಿನಿಯು ಮಹಿಳಾ ವಿಚಾರದಲ್ಲಿ ಉತ್ತಮ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಮೂಲಕ ಸಾಮಾಜಿಕ ಜಾಗೃತಿಯನ್ನು ಜನರಿಗೆ ಮೂಡಿಸುತ್ತಿದೆ ಎಂದರೆ ತಪ್ಪಾಗಲಾರದು. ಏಕೆಂದರೆ ಹೆಣ್ಣನ್ನು ರೂಢಿ ಮೂಲ ಸ್ಥಾನದಲ್ಲಿಯೇ ಇರಿಸಿ, ಲೈಂಗಿಕ ಆರ್ಕಷಣೆಯುಳ್ಳ, ಭೋಗಿಸುವ ವಸ್ತುವಿನಂತೆ, ಅಂಗಾಂಗ ವೈಭವೀಕರಿಸಿ ತಮ್ಮ ವ್ಯಾಪರೀಕರಣ ಮನೋಭಾವಕ್ಕೆ ತಕ್ಕಂತೆ ಇತರ ಖಾಸಗೀ ವಾಹಿನಿಗಳು ಉಪಯೋಗಿಸಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಇದಕ್ಕೆ ವ್ಯತಿರಿಕ್ತವಾಗಿ ಕೊಂಚಮಟ್ಟಿಗಾದರೂ ಅವಳ ಕಾಳಜಿಗಳಿಗೆ ಸ್ಪಂಧಿಸುತ್ತಾ, ಶಿಕ್ಷಣ, ಕಾನೂನು, ಉದ್ಯೋಗ, ಆರೋಗ್ಯ, ಮದುವೆ, ಕೌಟುಂಬಿಕ ವಲಯ, ವರದಕ್ಷಿಣೆ, ಅತ್ಯಾಚಾರ, ಕೃಷಿ ಕ್ಷೇತ್ರದಲ್ಲಿ ಆಕೆಯ ದುಡಿಮೆ...... ಹೀಗೆ ಅನೇಕ ವಲಯಗಳಲ್ಲಿ

ಅವಳು ಚಾಚಿಕೊಳ್ಳುತ್ತಿರುವ ಬಗೆಯನ್ನು ಕಾರ್ಯಕ್ರಮಗಳನ್ನಾಗಿಸಿ ಚಿತ್ತರಿಸುತ್ತ ಹೆಣ್ಣಿನ ಬಗ್ಗೆ ಈವರೆಗೂ ಇದ್ದಂತಹ ಕೀಳು ಮನೋಭಾವಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಅವಳ ಏಳ್ಗೆಗಾಗಿ ಶ್ರಮಿಸುತ್ತಿರುವ ಏಕೈಕ ದೂರದರ್ಶನ ವಾಹಿನಿ 'ಚಂದನ'.

ಮಾರ್ಚ್ ತಿಂಗಳನ್ನು ಮಹಿಳಾ ಮಾಸವೆಂದು ಆಚರಿಸುತ್ತಾ ಮೂವತ್ತೊಂದು ದಿನಗಳಲ್ಲಿ ಪೂರ ಮಹಿಳಾ ಸಾಧಿಕಿಯರನ್ನು ಪರಿಚಯಿಸುವಂತಹ ಶುಭೋದಯ ಕರ್ನಾಟಕ ಎಂಬ ಕಾರ್ಯಕ್ರಮವನ್ನು ಪ್ರಸಾರ ಮಾಡಿ ಸ್ತ್ರೀ ಸಶಕ್ತಿಕರಣಕ್ಕೆ ನಮ್ಮದು ಒಂದು ಕೈಯಿದೆ ಎನ್ನುವ ಬೆಂಬಲದ ಸೂಚನೆಯನ್ನು ತೋರಿಸುತ್ತಿರುವ ಚಂದನ ವಾಹಿನಿಯ ಕಾರ್ಯ ಶ್ಲಾಘನೀಯ. ಮಹಿಳಾ ಸಾಧಕಿಯರ ಸಾಧನೆಗಳನ್ನು ಪ್ರೇಕ್ಷಕರಲ್ಲಿ/ಮಹಿಳೆಯರಲ್ಲಿ ಬಿತ್ತುತ್ತಾ, ಹೊಸ ಭರವಸೆಯ ಕನಸನ್ನು ಕಾಣುವ ಅದನ್ನು ನನಸಾಗಿಸುವತ್ತಾ ಕ್ರಮಿಸುವ ದಾರಿಯನ್ನು ಹೇಳಕೊಡುವಂತಹ ಮಹತ್ತರ ಕಾರ್ಯವನ್ನು ದೂರದರ್ಶನ ಚಂದನ ವಾಹಿನಿ ಮಾಡುತ್ತಿದೆ. ಇಂತಹ ಹೆಗ್ಗಳಕೆಯ ಬೆನ್ನಲ್ಲೆ ತೆಗಳಕೆಯ ಮಾತುಗಳನ್ನು ಆಡಬಹುದಾದಂತಹ ಅನೇಕ ದೋಷಗಳು ಕೂಡ ಇಲ್ಲವೆ. ಮಹಿಳೆಯರನ್ನು ಒಂದು ವಾಹಿನಿ ಪ್ರತಿನಿಧಿಸುವ/ ಕಾಣಿಸುವ/ ತೋರಿಸುವ/ ಬಿಂಬಿಸುವ ಬಗೆ ಎಂತದ್ದು? ಅವಳ ವಿಚಾರಗಳಲ್ಲಿ ಆಸಕ್ತಿ ತೋರುತ್ತಾ ಸಬಲೀಕರಣದಂತಹ ಅನೇಕ ಕಾರ್ಯಕ್ರಮಗಳನ್ನು ಪಸರಿಸುತ್ತಾ ಇದ್ದರೂ ಸಿದ್ಧರೂಢವಾದ ಪ್ರತಿಮೆಗಳ ಮೂಲಕ ವ್ಯಾಪಾರಿ ಸಂಸ್ಕೃತಿಯ ಪ್ರತೀಕವಾಗಿ ಅವಳನ್ನು ಕಾಣುತ್ತಿರುವ ಪರಿ ಮಾತ್ರ ಬದಲಾಗಿಲ್ಲ. ಪುರುಷಪ್ರಧಾನ ಮೌಲ್ಯಗಳಡಿಯಲ್ಲಿಯೇ ಪ್ರಧಾನ ಸಂಸ್ಕೃತಿಗೆ ಅನುಕೂಲವಾಗಿ ಅರ್ಧ ಸತ್ಯವನ್ನು ಹೇಳುತ್ತಾ ಮತ್ತೆ ಮತ್ತೆ ಅವಳನ್ನು ಹೀಯಾಳನೆಯ ದೃಷ್ಟಿಯಲ್ಲಿಯೇ ಕಾಣುತ್ತಾ, ದ್ವಿತೀಯ ದರ್ಜೆಯಿಂದ ಬಿಡುಗಡೆಗೊಳಸದೇ, ಅಲ್ಲಿಯೇ ಸ್ಥಾಯೀಕರಿಸುವಂತಹ ಹುನ್ನಾರಗಳು ನಡೆಯುತ್ತಿವೆ. ಸಮಾಜದ ಯಾವ ವಲಯವು ಇದಕ್ಕೆ ಹೊರತಾಗಿಲ್ಲ. ಗಂಡಾಳ್ವಿಕೆಯ ಒಡೆತನದಡಿ ಕಾರ್ಯ ನಿರ್ವಹಿಸುತ್ತಿರುವ ದೂರದರ್ಶನ ಚಂದನ ವಾಹಿನಿಯು ಕೆಲವೊಂದು ಕಾರ್ಯಕ್ರಮಗಳನ್ನು ಹೊರತು ಪಡೆಸಿದರೆ ಮಹಿಳೆಯ ವಿಚಾರಗಳಲ್ಲಿ ಮತ್ತದೇ ಸನಾತನದ ಧೋರಣೆಯನ್ನು ಅನುಸರಿಸುತ್ತಾ ಬಂದಿದೆ ಎನ್ನಬಹುದು.

ಸೌಂದರ್ಯ ಎನ್ನುವ ವ್ಯವಸ್ಥೆಯ ಮೂಢತನವನ್ನೇ ಪುಷ್ಟಿಕರಿಸುವಂತೆ ಅವಳಗೊಂದು ಡ್ರಸ್ ಕೋಡ್ ಮಾಡಿ ಅದರಡಯಲ್ಲಿಯೇ ನಡೆಸಿಕೊಳ್ಳುತ್ತಾ, ಇಂತಹ ಕಾರ್ಯಕ್ರಮಕ್ಕೆ ಹೀಗೆ ಸಿದ್ಧಳರಬೇಕೆಂಬ ನಿಯಮಗಳನ್ನು ಜಾರಿ ಮಾಡಿರುವುದನ್ನು ಗಮನಿಸಿದರೆ ಯಾಕೆ ಹೀಗೆ? ಯಾವಾಗಲೂ ಯಾವುದಾದರೂ ಒಂದು ಚೌಕಟ್ಟಿನಲ್ಲಿಯೇ ಬಂಧಿಸುವಂತಹ ಕೆಲಸ ಹೆಣ್ಣಿನ ಮೇಲೆ ಯಾಕೆ ಆಗುತ್ತಿದೆ? ಎಂಬ ಪ್ರಶ್ನೆ ಕಾಡುತ್ತದೆ. ಇನ್ನು ಮುಂದುವರೆದು ನೋಡಿದರೆ ಮಹಿಳಾ ವಿಷಯಗಳನ್ನೊಳಗೊಂಡ ಕಾರ್ಯಕ್ರಮಗಳನ್ನು ನಡೆಸಿಕೊಡುವ ಜವಾಬ್ದಾರಿ ಮತ್ತು ಬರುವಂತಹ ಅತಿಥಿಗಳು ಮಹಿಳೆಯರೇ. ಅಪವಾದವೆಂಬಂತೆ ಕೆಲವೊಂದು ಕಾರ್ಯಕ್ರಮಗಳಲ್ಲಿ ಪುರುಷ ನಿರೂಪಕರನ್ನು ಬಿಟ್ಟರೆ. ಉಳದಂತೆ ಇಡೀ ಅವಳ ಕಾರ್ಯಕ್ರಮವನ್ನು ಅವಳೇ ನಡೆಸಿಕೊಡಬೇಕು. ಯಾಕೆ ಈ ರೀತಿಯ ಅಸಮಾನತೆ? ಈ ಚಿಂತನೆ ಬದಲಾದರೆ ಒಳತು. ಸ್ತ್ರೀ ಪುರುಷರ ನಡುವಿನ ಅಸಮಾನತೆ ಪ್ರಕೃತಿ ಸಹಜವಲ್ಲ. ಅದು ಸಾಂಸ್ಕೃತಿಕ ಹಿನ್ನಲೆಯಾದಾಗಿದ್ದು, ಪರಿಸರ ಕಾರಣ ಉದ್ಭವಿಸಿದ್ದು ಎನ್ನುವ ಸಣ್ಣ ಅರಿವಿನೊಂದಿಗೆ ಮುಂಬರುವ ಮಹಿಳಾ ಕಾರ್ಯಕ್ರಮಗಳನ್ನು ಪುರುಷರೇ ಗುರುತಿಸಿ ಅವರೇ ನಡೆಸಿಕೊಟ್ಟರೆ ಚೆಂದ ಎಂಬುದು ನನ್ನ ಅಭಿಪ್ರಾಯ ಏಕೆಂದರೆ ಹೆಣ್ಣಿನ ಅನೇಕ ಸಮಸ್ಯೆಗಳು ಗಂಡಿಗೆ ಗೊತ್ತಾಗದಂತೆ ಮುಚ್ಚಿಡುವ ಕೆಲಸವನ್ನು ಮಾಡಿದೆ ನಮ್ಮೀ ಸಂಪ್ರದಾಯ ಸಮಾಜ. ಇಷ್ಟು ದಿನಗಳು ತೆರೆಮರೆಯಲಿಯೇ ಮುಚ್ಚಿಟ್ಟುಕೊಂಡು ಅನುಭವಿಸುತ್ತಿದ್ದ ಅವಳ ನೋವು, ದುಃಖ ದುಮ್ಮಾನ,

ಸಮಸ್ಯೆಗಳು ಅವನಿಗೆ ತಿಳಿಯಲಿ. ಆ ಮೂಲಕವಾದರೂ ಅವನ ಸ್ಪಂದನೆ ಸಿಕ್ಕರೆ ಆಕೆಯ ಬದುಕು ಹಸನಾದೀತು. ಲಿಂಗ ಸಮಾನತೆಯಂತಹ ಇಂತಹ ವಿಚಾರಗಳನ್ನು ಸಮೂಹ ಮಾಧ್ಯಮಗಳು ಬಿತ್ತರಿಸುತ್ತಾ ಸಾಗಿದರೆ ಸಮಾಜದ ಸ್ವಾಸ್ತ್ಯವನ್ನು ಕಾಪಾಡುವ ದೆಸೆಯಲ್ಲಿ, ಸ್ತ್ರೀ–ಪುರುಷ ಇಬ್ಬರೂ ಸಮಾನತೆಯ ಆಧಾರದ ಮೇಲೆ ಕೆಲಸ ಮಾಡುತ್ತಾ; ಸಮಾನತೆಯ ಹಕ್ಕುಗಳನ್ನು ಅನುಭವಿಸುತ್ತಾ, ಸಮಾನವಾದ ಜವಾಬ್ದಾರಿಗಳನ್ನು ಹೊರಲು ಅವಕಾಶ ಮಾಡಿ ಕೊಟ್ಟಂತಾಗುತ್ತದೆ.

ಇತ್ತೀಚಿಗೆ ಜಾಹಿರಾತು ಪ್ರಪಂಚ ಅತೀ ವೇಗವಾಗಿ ಬೆಳೆಯುತ್ತಾ ತನ್ನ ಅವಸರಕ್ಕೆ ಸ್ತ್ರೀಯನ್ನು ಒಂದು ವಸ್ತುವಾಗಿಯೇ ಪರಿಗಣಿಸಿದೆ. ಸ್ತ್ರೀದೇಹ ಜಾಹಿರಾತು ಮಾರಾಟ ಕ್ಷೇತ್ರದ ಕೇಂದ್ರವಾಗಿಯೇ ಉಳಿದು ಬಿಟ್ಟಿದೆ. ಈ ಪ್ರವೃತಿಯ ಜಾಹಿರಾತುಗಳು ಪ್ರಸ್ತುತ ವಾಹಿನಿಯಲ್ಲಿ ಅತೀಯಾಗಿ ಬಿತ್ತರಗೊಳ್ಳದಿದ್ದರೂ ಅಡುಗೆ ಮನೆ ಪರಿಕರಗಳಿಗೆ, ಸಾಬೂನು–ಸೌಂದರ್ಯ ವರ್ಧಕಗಳಂತಹ ಜಾಹಿರಾತುಗಳಿಗೆ ಅವಳೇ ವಸ್ತುವಾಗಿರುವುದನ್ನು ಕಾಣಬಹುದು. ಈ ಪದ್ಧತಿ ಬದಲಾಗಬೇಕಿದೆ. ಈ ರೀತಿಯ ಪ್ರವೃತ್ತಿ ಸ್ತ್ರೀಯರ ಸ್ಥಿತಿಗತಿಗಳ ಮೇಲೆ ಘಾತುಕ ಪರಿಣಾಮ ಬೀರುತ್ತದೆ. ಮತ್ತದೇ ಪರಂಪರೆಯ ಮೂಸೆಯಲ್ಲಿಯೇ ಅವಳನ್ನು ಇರಿಸಿ ನೋಡುವಂತಹ ಅಸಹನೀಯ ಭಾವ ಬದಲಾಗಿ ಅವಳೊಂದು ವಸ್ತುವಲ್ಲ ಜೀವವಿರುವ, ಬುದ್ಧಿಯಿರುವ, ಚಲನೆಯುಕ್ತ ಮನುಷ್ಯ ಜೀವಿ ಎಂಬುದನ್ನು ಸಮೂಹ ಮಾಧ್ಯಮಗಳು ಪರಿಗಣಿಸಿ ಅದನ್ನು ಸಮಾಜಕ್ಕೆ ವರ್ಗಾಹಿಸುವ/ಮನಗಾಣಿಸುವ ಅವಶ್ಯಕತೆ ಇದೆ.

ಮಹಿಳೆಯರು ಚಾರಿತ್ರಿಕವಾಗಿ ಧಮನಿತರ ಪರಾಧೀನತೆಯ ಒಂದು ಸಮೂಹವೇ ಆಗಿರುವುದರಿಂದ ಅವರ ಈ ಪರಾಧೀನತೆಯನ್ನು ನಿವಾರಿಸಬೇಕಾದರೆ ಮತ್ತು ಸಾಮಾಜಿಕ ಸಂರಚನೆಯೊಳಗೆ ಮೂಲಭೂತ ಬದಲಾವಣೆಗಳನ್ನು ತರಲು ಸಮೂಹ ಮಾಧ್ಯಮಗಳು ಸ್ತ್ರೀಯರ ನಿಜವಾದ ಕಾಳಜಿಗಳನ್ನು, ಆಸಕ್ತಿಯನ್ನು ಅವಳದೇ ಪರಿಭಾಷೆಯಲ್ಲಿ ಅಭಿವ್ಯಕ್ತಿಸುವ ಕೆಲಸವನ್ನು ಮಾಡಬೇಕಿದೆ. ಏಕೆಂದರೆ ಸಮಾಜದ ಸಂರಚನೆಗಳಾದ ಜಾತಿ , ಕುಟುಂಬ, ವರ್ಗ, ಸಮುದಾಯಗಳಲ್ಲಿರುವ ಸ್ತ್ರೀ ವಿರೋಧಿ ಮೌಲ್ಯಗಳ ಬೇರುಗಳನ್ನು ಇಂದು ಕಿತ್ತೊಗೆಯುವ ಅಗತ್ಯವಿದೆ. ಅವಳ ಮೂಲಭೂತ ಸಮಸ್ಯೆಗಳನ್ನು ವಸ್ತುನಿಷ್ಟವಾಗಿ ವಿಶ್ಲೇಷಿಸಿ ಅವುಗಳ ಮೇಲೆ ಬೆಳಕು ಚೆಲ್ಲುವ ಕಾರ್ಯಕ್ರಮಗಳು ರೂಪುಗೊಂಡರೆ ಮಾಧ್ಯಮಗಳು ಸ್ತ್ರೀ ಸಬಲತೆಯ ಪ್ರಕ್ರಿಯೆಗೆ ಹಿಂಬು ಕೊಟ್ಟಂತಾಗುತ್ತದೆ.

ದೂರದರ್ಶನವು ಪತ್ರಿಕಾ ಮಾಧ್ಯಮಕ್ಕಿಂತ ಹೆಚ್ಚು ಪ್ರಭಾವಶಾಲಿಯಾದ ಮತ್ತು ವಿಶಾಲ ವ್ಯಾಪ್ತಿಯುಳ್ಳ ಮಾಧ್ಯಮ. ದುರದೃಷ್ಟವಶಾತ್ ಇಂದು ನಮ್ಮ ದೇಶದಲ್ಲಿ ದೂರದರ್ಶನ ಮಹಿಳಾ ಕಾಳಜಿಗಿಂತ ಮಹಿಳಾ ಶೋಷಣೆಯ ಆಯಾಮಗಳಾದ ಜಾಹಿರಾತು ಮತ್ತು ಭೋಗವಸ್ತುವಿನೋಪಾದಿ ಚಿತ್ರೀಕರಿಸುವ ಪರಿಯೇ ಹೆಚ್ಚಾಗಿದೆ. ಇದರ ಬದಲು ದೂರದರ್ಶನವನ್ನೊಳಗೊಂಡಂತೆ ಸಮೂಹ ಮಾಧ್ಯಮಗಳು ಮಹಿಳಾ ಕಾಳಜಿಗಳ ಪ್ರತಿಪಾದನೆಗೆಂದು ಎಂದು ಶ್ರಮಿಸಿದರೆ ಮಾಧ್ಯಮಗಳು ಪ್ರಜಾಪ್ರಭುತ್ವದ ನಾಲ್ಕನೆಯ ಅಂಗ ಎಂಬ ಮಾತನ್ನು ಸಾರ್ಥಕ್ಯಗೊಳಿಸಿದಂತಾಗುತ್ತದೆ.

ಮಹಿಳೆಯರ ಸಮಸ್ಯೆಗಳನ್ನು ಕುರಿತು ಕಾರ್ಯಕ್ರಮ ಪ್ರಸಾರ ಮಾಡುವಾಗ ಸ್ತ್ರೀ ಪರವಾದ ಅಭಿಪ್ರಾಯಗಳನ್ನು ವೀಕ್ಷಕರಲ್ಲಿ ಮೂಡಿಸಲು/ರೂಢಿಸಲು ವಸ್ತುಸ್ಥಿತಿಯ/ ಸಮಸ್ಯೆಯ ಮಾಹಿತಿಯನ್ನು ಸಂಕ್ಷಿಪ್ತವಾಗಿ ವಿವರಿಸಿ ಆ ವಿಷಯವನ್ನು ಕುರಿತ ಸಾರ್ವಜನಿಕ ಅಭಿಪ್ರಾಯ ಸಮೀಕ್ಷೆಯನ್ನು ಮಾಡಬಹುದು. ಇದರಿಂದ ಪುರುಷರು ಮಾಡುವ ಎಷ್ಟೋ ಕೀಟಲೆಗಳೇ ಅವಳಲ್ಲಿ ಮಾನಸಿಕ ಹಿಂಸೆಯಾಗಿ ರೂಪು ತಾಳುತ್ತಿವೆ ಎನ್ನುವ ಅರಿವು ಮೂಡಿಸಿದಂತಾಗುತ್ತದೆ.

ಆ ಮೂಲಕ ವೀಕ್ಷಕರ ಸಹಾನುಭೂತಿಯನ್ನು ಗಳಿಸುತ್ತಾ ಸ್ತ್ರೀಪರ ಮನೋಭಾವವನ್ನು ಅವರಲ್ಲಿ ಬೆಳೆಸಲು ಸಾಧ್ಯವಾಗುತ್ತದೆ.

ಮಹಿಳೆಯರ ಸಮಸ್ಯೆಗಳನ್ನಷ್ಟೆ ಬಿತ್ತರಿಸಿ ಅವುಗಳನ್ನು ಕಾಳಜಿ ಎಂದರೆ ತಪ್ಪಾಗಬಹುದು. ಇದರೊಂದಿಗೆ ಸಮಾಜದಲ್ಲಿ ಸಮಾನತೆಗಾಗಿ ಹೋರಾಡುತ್ತಿರುವ ಮಹಿಳೆಯರ ಬಗೆಗೆ, ಭಾರತೀಯ ಸ್ತ್ರೀವಾದಿ ಚಳುವಳಿಯ ಸಂದರ್ಭ, ಮಹಿಳಾ ಸಂಘಟನೆಗಳು, ಸ್ತ್ರೀವಾದದ ನಿಜವಾದ ಉದ್ದೇಶ–ಇತ್ಯಾದಿ ವಿಚಾರಗಳ ಪ್ರಸರಣ ಕ್ರಿಯೆ ನಡೆದರೆ ಜನರಲ್ಲಿ ಸಮಾನತೆಯ ಬೀಜವನ್ನು ಬಿತ್ತುವ ಕೆಲಸವನ್ನು ಸಮೂಹ ಮಾಧ್ಯಮಗಳು ಮಾಡಿದಂತಾಗುತ್ತದೆ.

ಮಹಿಳೆಯರಿಗೆ ವಾಹಿನಿಗಳಲ್ಲಿ ಸಮಾನವಾದ ಉದ್ಯೋಗವಕಾಶ ಮತ್ತು ಸ್ಥಾನಗಳು ಇಲ್ಲವಾಗಿವೆ. ಸ್ತ್ರೀಪರ ಕಾಳಜಿಗಳು ಸಮೂಹ ಮಾಧ್ಯಮಗಳಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವುದಕ್ಕೆ ಇದೂ ಒಂದು ಮುಖ್ಯ ಕಾರಣವೆಂಬ ವಾದವು ಇದೆ. ಆದ್ದರಿಂದ ಮಹಿಳೆಯರು ಮುಖ್ಯವಾಹಿನಿಯಂತಹ ಸಮೂಹ ಮಾಧ್ಯಮಗಳ ಕ್ಷೇತ್ರವನ್ನು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಿಸಬೇಕು ಜೊತೆಗೆ ಈ ಕ್ಷೇತ್ರದಲ್ಲಿ ಮಹಿಳೆಯರಿಗೆ ನಿರ್ಣಾಯಕ ಮತ್ತು ಅಧಿಕಾರಯುತವಾದ ಉನ್ನತ ಹುದ್ದೆಗಳನ್ನು ನೀಡಬೇಕು. ಹಿಂದಿನ ಸ್ಥಿತಿಗೆ ಹೋಲಿಸಿದರೆ ಈಗಿನ ಪರಿಸ್ಥಿತಿ ಸುಧಾರಿಸಿದೆಯೇ ಹೊರತು ಬದಲಾಗಿಲ್ಲ. ಬದಲಾವಣೆಯಂತಹ ಪ್ರಕ್ರಿಯಾತ್ಮಕ ಕೆಲಸಗಳನ್ನು ಮಾಧ್ಯಮಗಳು ಮಾಡಬೇಕಿದೆ.

ಈಯೆಲ್ಲ ವಿಚಾರಗಳೊಂದಿಗೆ ಬಹುಮುಖ್ಯವಾಗಿ ಚಂದನ ವಾಹಿನಿಯಂತಹ ಮಾಧ್ಯಮಗಳು ವೀಕ್ಷಕರ ಆದ್ಯತೆಗಳಿಗೆ ಹೆಚ್ಚು ಗಮನಕೊಡಬೇಕಾಗಿದೆ. ವೀಕ್ಷಕರ ಅಭಿಪ್ರಾಯಗಳನ್ನು ಕಾಲಕಾಲಕ್ಕೆ ನಿಯಮಿತವಾಗಿ ಅಧ್ಯಯನ ಮಾಡಿ ವಿಶ್ಲೇಷಿಸುವ ಅಗತ್ಯವಿದೆ. ಇದರಿಂದ ಯಾವ ಬಗೆಯ ಲಿಂಗ ಸಂಬಂಧಿ ಸಂವೇದನಾಶೀಲ ಕಾರ್ಯಕ್ರಮಗಳ ಮೂಲಕ ಪ್ರಗತಿಪರ ಸಂದೇಶಗಳನ್ನು ಪರಿಣಾಮಕಾರಿಯಾಗಿ ತಲುಪಿಸಲು ಸಾಧ್ಯ ಎಂಬುದನ್ನು ತಿಳಿಯಬಹುದು. ಸಮೂಹ ಮಾಧ್ಯಮಗಳು ಇಂದು ಮಹಿಳೆಯರನ್ನು ಗುರಿಯಾಗಿರಿಸಿಕೊಂಡು ಪ್ರಸಾರ ಮಾಡುತ್ತಿರುವ ಮಾಹಿತಿ, ವಿಚಾರಗಳು ಇತ್ಯಾದಿಗಳೊಂದಿಗೆ ಅವುಗಳು ಮಹಿಳೆಯರ ಮನೋಬುದ್ಧಿ, ಹೃದಯಗಳಿಂದ ಹಾಗೂ ಅವರ ಅನುಭವಗಳಿಂದ ಹೊರ ಹೊಮ್ಮುವ ವಿಚಾರಗಳನ್ನು ಮತ್ತು ಮೌಲ್ಯಗಳನ್ನು ಸಾರ್ವಜನಿಕರೊಟ್ಟಿಗೆ ಪರಸ್ಪರ ಹಂಚಿಕೊಳ್ಳುವ ವೇದಿಕೆಗಳಾದಾಗ ಮಾತ್ರ ಎಷ್ಟೋ ಶತಮಾನಗಳಿಂದ ದನಿಯಿಲ್ಲದೆ ಬದುಕಿದ ಸ್ತ್ರೀ ಸಮೂಹಕ್ಕೆ ಗಟ್ಟಿದನಿಕೊಟ್ಟಂತಹ ಶ್ರೇಯಸ್ಸು ಮಾಧ್ಯಮಗಳಿಗೆ ಸಲ್ಲುತ್ತದೆ.

ಇಂದು ಸ್ತ್ರೀ ಕಾಳಜಿಗಳೊಂದಿಗೆ ಸಮಾಜದ ಹಲವಾರು ಮುಖ್ಯ ಕಾಳಜಿಗಳನ್ನು ಕುರಿತು ಸಮೂಹ ಮಾಧ್ಯಮಗಳು ತಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಜವಾಬ್ದಾರಿಗಳನ್ನು ನಿರ್ವಹಿಸಬೇಕಾದ ಜರೂರಿದೆ. ಇಂತಹ ಸ್ತ್ರೀಮುಖಚಲನೆಯ ಸಾಮಾಜಿಕ ಕಾಳಜಿಯ ಕಾರ್ಯಪ್ರವೃತ್ತಿಗಾಗಿ ಮಹಿಳೆಯರು ಮತ್ತು ಆಕೆಯ ವಿಚಾರಗಳ ಬಗ್ಗೆ ಒಲವಿರುವ ಅಥವಾ ಕನಿಷ್ಠ ಪಕ್ಷ ಸಮಷ್ಟಿಯ ಪ್ರಗತಿಪರ ಬದಲಾವಣೆಯನ್ನು ಬಯಸುವ ಕ್ರೀಯಾಶೀಲ ಉತ್ಸಾಹಿ ಪುರುಷರಿಂದಲೂ ಈ ಬಗೆಯ ಬದಲಾವಣೆಗಳನ್ನು ನಿರೀಕ್ಷಿಸಬಹುದು. ಇವರಿಬ್ಬರ ಸಂಗಮದಿಂದ ಸಮಾನತೆಯೆಂಬ ಸಸಿ ಚಿಗುರೊಡೆದು ಮರವಾಗಿ ಭವಿಷ್ಯದ ಸಮಾಜವನ್ನು ತಣ್ಣಗಿರಿಸಬೇಕೆಂದು ಆಶಾವಾದಿತನದ ಬಿತ್ತುವಿಕೆ ಸಮೂಹ ಮಾಧ್ಯಮಗಳಿಂದಾಗಬೇಕಿದೆ.

ಪ್ರಸ್ತುತದಲ್ಲಿ ಇತರ ಖಾಸಗಿ ವಾಹಿನಿಗಳಿಗೆ ಹೋಲಿಸಿಕೊಂಡರೆ ಸ್ತ್ರೀವಾದಿ/ಸ್ತ್ರೀಪರ ವಿಷಯಗಳಿಗೆ ಚಂದನ ವಾಹಿನಿ ಸ್ಪಂಧಿಸುತ್ತಿರುವ ಬಗೆ ಭಿನ್ನವಾಗಿದ್ದು–ಆದರ್ಶವಾಗುವ ನಿಟ್ಟಿನಲ್ಲಿ ಸಾಗುತ್ತಿರುವುದು ಸಂತೋಷದ ವಿಷಯ . ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವಂತಹ ಕೆಲಸದೊಂದಿಗೆ ಮಹಿಳೆಯರ ಕಾರ್ಯಕ್ರಮಗಳ ಬಗೆಗೆ ತಾಳಿರುವ ಧೋರಣೆಗಳು ಕೂಡ ಸ್ತುತ್ಯಾರ್ಹವಾಗಿದೆ.